ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ ಟೋಟಲ್ ಪ್ರಾಹಿಬಿಷನ್ ಮಾಡುವುದಕ್ಕೆ ಸರ್ಕಾರ ಇರುವ ತೊಂದರೆ ಏನು ? ಏತಕ್ಕೆ ಮಾತಬಾರದು ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಪ್ರಪಂಚದಲ್ಲಿ ಎಲ್ಲರೂ ಟ್ರೈ ಮಾಡಿ ಸಾಕಾಗಿ ಪುನಃ ವಾಪಸ್ ಅದೇ ಜಾಗಕ್ಕೆ ಬಂದಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ ಎಕ್ಸ್ಸೈಜ್ ರೆವಿನ್ಯೂ ೨೪೧ ಕೋಟಿ ರೂಪಾಯಿಗಳು ಇನ್‌ಕ್ರೀಜ್ ಆಗಿದೆ ಎಂದು ಹೇಳಿದ್ದಾರೆ. ಇಷ್ಟು ಇನ್‌ಕ್ರೀಜ್ ಆಗಲು ಕಾರಣವೇನು ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಬರೀ ೨೪೧ ಕೋಟಿ ರೂಪಾಯಿಗಳು ಅಲ್ಲ. Rs. 243 crores by direct receipts from Excise Auction. On the increased sale, we get excise duty on that sale, that is about Rs. 102 crores. I am glad to inform the House that we get Rs. 307 crores more, over and above what we have got last year, only on arrack alone. The reason is, we have stopped seconds.

ಶ್ರೀ ಎಂ. ವಿ. ವೆಂಕಟಪ್ಪ.—ಪುನಃ ಇದರಲ್ಲಿ ಫಿಲ್‌ಪರೇಜ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ರಾಜಶೇಖರಮೂರ್ತಿ.—ಇನ್ನು ಮೇಲೆ ಆದಕ್ಕೆ ಆಸ್ಪದಕೊಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ ತರಳುಬಾಳು ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಇತೀ ರಾಜ್ಯದಲ್ಲಿ ಪಾನ ನಿಷೇದ ಆಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಆ ರೀತಿ ಹೋರಾಟ ಮಾಡತಕ್ಕಂಥಾದ್ದು ಬಹಳ ಅಪರೂಪ. ಆದ್ದರಿಂದ ಆ ಒಂದು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಪಾನ ನಿಷೇದ ಮಾಡಲು ಸಾಧ್ಯವೇ ?

Sri M. V. Rajashakar Murthy.—I do not accept that suggestion

ಸಮಗ್ರ ಬಾಲವಿಕಾಸ ಯೋಜನೆಯನ್ನು ಮಾಗಡಿ ತಾಲ್ಲೂಕಿನಲ್ಲಿ ಅನುಷ್ಠಾನಕ್ಕೆ ತರುವ ಬಗ್ಗೆ

೧೩೭. ಶ್ರೀ ಹೆಚ್. ಎಂ. ರೇವಣ್ಣ. (ಮಾಗಡಿ).—ಮಾನ್ಯ ಕಾನೂನು ಯೋಜನೆ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾಗಡಿ ತಾಲ್ಲೂಕಿನಲ್ಲಿ ಸಮಗ್ರ ಬಾಲವಿಕಾಸ ಯೋಜನೆಯು ಅನುಷ್ಠಾನದಲ್ಲಿಯೇ ;

ಆ) ಇಲ್ಲದಿದ್ದರೆ, ಕಾರಣವೇನು ;

ಇ) ಈ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ. ?

ಶ್ರೀ ಎಂ. ವೀರಪ್ಪ ಮೊಯ್ಲಿ ಕಾನೂನು, ಸಂಸದೀಯ ವ್ಯವಹಾರ, ಮತ್ತು ಪ್ರವಾಸೋದ್ಯಮ ಸಚಿವರು ಸಮಾಜ ಕಲ್ಯಾಣ ಸಚಿವರ ಪರವಾಗಿ.—

ಅ) ಇಲ್ಲ

ಆ) ಭಾರತ ಸರ್ಕಾರವು ಅಧ್ಯತೆಯ ಮೇರೆಗೆ ಪರಿಶಿಷ್ಟ ಪಂಗಡ, ಜನಸಾಂದ್ರತೆ ಇರುವ ಪ್ರದೇಶ, ಬರಪೀಡಿತ ಪ್ರದೇಶ ಹಾಗೂ ಹಿಂದುಳಿದ ತಾಲ್ಲೂಕುಗಳಿಗೆ ಸಮಗ್ರ ಬಾಲವಿಕಾಸ ಯೋಜನೆಯನ್ನು ಮಂಜೂರು ಮಾಡುತ್ತದೆ. ಮಾಗಡಿ ತಾಲ್ಲೂಕಿಗೆ ಮಂಜೂರು ಮಾಡಿಲ್ಲವಾದ್ದರಿಂದ ಸಮಗ್ರ ಬಾಲವಿಕಾಸ ಯೋಜನೆಯನ್ನು ಪ್ರಾರಂಭಿಸಿಲ್ಲ.

ಇ) ಕೇಂದ್ರ ಸರ್ಕಾರವು ಈ ಯೋಜನೆಯನ್ನು ಮಂಜೂರು ಮಾಡಿದ ನಂತರ ಅನುಷ್ಠಾನಗೊಳಿಸಲಾಗುತ್ತದೆ.

ಶ್ರೀ ಹೆಚ್. ಎಂ. ರೇವಣ್ಣ —ಮಾನ್ಯ ಅಧ್ಯಕ್ಷರೇ, ನನ್ನ ಎರಡನೆಯ ಪ್ರಶ್ನೆಗೆ, ಭಾರತ ಸರ್ಕಾರವು ಅಧ್ಯತೆ ಮೇರೆಗೆ ಪ್ರೋಗ್ರಾಮ್‌ಗಳನ್ನು ಆಯ್ಕೆ ಮಾಡಲಾಗುತ್ತದೆಂದು ಹೇಳಿದ್ದಾರೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವೂ ಕೂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆಯೇ ? ಹಾಗಿದ್ದರೆ, ಕೇಂದ್ರ ಸರ್ಕಾರವು ನಮ್ಮ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಆಯ್ಕೆ ಮಾಡಿದೆ ? ರಾಜ್ಯ ಸರ್ಕಾರವು ಎಷ್ಟು ತಾಲ್ಲೂಕುಗಳನ್ನು ಆಯ್ಕೆಮಾಡಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ,

ಶ್ರೀ ಹೆಚ್. ಎಂ. ರೇವಣ್ಣ.—ಮಾಗಡಿ ತಾಲ್ಲೂಕನ್ನು ಈ ಯೋಜನೆಯಲ್ಲಿ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸಧ್ಯಕ್ಕೆ ಮಾಗಡಿ ತಾಲ್ಲೂಕನ್ನು ಸೇರಿಸಿಲ್ಲ. ಈ ಬಗ್ಗೆ ಬಹುಶಃ ಉತ್ತರವನ್ನು ನಾನು ಕೊಟ್ಟಿದ್ದೇನೆ. ೨೮ ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರ್ಕಾರ ಏನು ಮಂಜೂರು ಮಾಡಿದೆ. ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟು ಆನುಷ್ಠಾನ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಹೊಸದಾದಂಥ ಪ್ರಸ್ತಾವವನ್ನು ಕಳುಹಿಸಿದಾಗ ಮಾಗಡಿ ತಾಲ್ಲೂಕನ್ನು ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಸ್ಥಿರ ಬೆಲೆಗಳ ನಿಗಧಿಪಡಿಸುವುದು

೧೧೦೯ ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರೇಷ್ಮೆ ಬಿತ್ತನೆ ಕೋಶಿಯಿಂದ ಮೊಟ್ಟೆಗಳನ್ನು ಮಾರಾಟ ಮಾಡಲು ಒಂದು ಸ್ಥಿರವಾದ ಬೆಲೆಯನ್ನು ನಿಗಧಿಗೊಳಿಸಲಾಗಿದೆಯೆ.

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ಎಸ್. ಆತ್ಮಾನಂದ ರೇಷ್ಮೆ ಸಚಿವರು.—

ಅ) ಇಲ್ಲ

ಆ) ಬಿತ್ತನೆ ಗೂಡಿನ ಬೆಲೆಯು ಏರುಪೇರುಗಳಿಂದ

ಶ್ರೀ ಕೆ.ಎಂ. ಪುಟ್ಟು.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ರೇಷ್ಮೆ ಮೊಟ್ಟೆಗಳನ್ನು ಸರ್ಕಾರಿ ಗ್ರೈನೇಜ್‌ಗಳಲ್ಲಿ ವರ್ಷಕ್ಕೆ ೩ರಿಂದ ೪ಸಾರಿ ವ್ಯತ್ಯಾಸದ ಬೆಲೆಯಲ್ಲಿ ಮಾರಾಟ ಮಾಡುತ್ತಿರುತ್ತಾರೆ. ಇವರು ಏನು ಖಾಸಗಿ ಮೊಟ್ಟೆ ಉತ್ಪನ್ನದಾರರಿಗೆ ನಿಗದಿಪಡಿಸಿದ ಒಂದು ದರದಲ್ಲಿ ಬಿತ್ತನೆ ಗೂಡನ್ನೂ ಕೊಡುತ್ತಿದ್ದಾರೋ ಅವರೂ ಸಹ ಇವರ ಹಿಡಿತದಲ್ಲಿ ಇದ್ದಾರೆ. ಈ ವರ್ಷ ೨೫೦ರಿಂದ ೩೦೦ ರೂಪಾಯಿಯವರೆಗೆ ಮೊಟ್ಟೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವರ ಅಧಿಕಾರಿಗಳೇ ಇದಕ್ಕೆ ಕಾರಣ. ಮತ್ತೆ ವಿಶ್ವಬ್ಯಾಂಕ್‌ನಿಂದ ಇವರು ನೆರವು ಪಡೆದಿದ್ದಾರೆ ವರ್ಷಕ್ಕೆ ಒಂದು ಸಾರಿ ಶೇಕಡಾ ೧೦ರಿಂದ ೧೫ ಪರ್‌ಸೆಂಟ್ ಜಾಸ್ತಿ ಮಾಡಬೇಕೇ ವಿನಹ ಸರ್ಕಾರಿ ಸ್ವಾಮ್ಯದಲ್ಲಿ ವರ್ಷಕ್ಕೆ ೩ಸಾರಿ ೪ಸಾರಿ ಮೊಟ್ಟೆಗಳ ಬೆಲೆಗಳನ್ನು ಏರಿಳಿಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ಹಾಗೇನಾದರೂ ರೈತರಿಗೆ ಸಹಾಯ ಮಾಡಬೇಕೆಂದು ವಿಶ್ವಬ್ಯಾಂಕ್‌ನಲ್ಲಿ ಏನು ನೆರವು ಸಿಗುತ್ತದೆಯೋ ಆದರಲ್ಲಿ ವರ್ಷಕ್ಕೆ ೫ ಪೈಸೆಯಾದರೂ ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಟ್ಟು ಒಂದು ಸಮತೋಲನವಾದ ರೀತಿಯಲ್ಲಿ ಮೊಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ಇವರಿಗೆ ಏನು ತೊಂದರೆ ಇದೆಯೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ:—ಮಾನ್ಯ ಅಧ್ಯಕ್ಷರೇ, ಈ ಖಾಸಗೀ ಮೊಟ್ಟೆ ತಯಾರಕರ ಮೇಲೆ ಬೆಲೆ ನಿಯಂತ್ರಣ ಮಾಡುವುದಕ್ಕೆ ಸರ್ಕಾರದ ಕೈಯಲ್ಲಿ ಇಲ್ಲ. ಖಾಸಗೀ ಮೊಟ್ಟೆ ತಯಾರಕರ ಮೇಲೆ ಮೇಲೆ ಗುಣ ನಿಯಂತ್ರಣ ಇರತಕ್ಕಂಥದ್ದು, ನಮ್ಮ ಸರ್ಕಾರದ ಬಿತ್ತನೆ ಕೋಶಿಯಲ್ಲಿ ಏನು ಮೊಟ್ಟೆ ಉತ್ಪಾದನೆ ಮಾಡುತ್ತಾರೋ ಅದರ ಒಂದು ಮೂಲ ಉದ್ದೇಶ ರೈತರಿಗೆ ಸೇವೆ ಸಲ್ಲಿಸಬೇಕೆಂದು ಆ ಉದ್ದೇಶ ಇಟ್ಟುಕೊಂಡು ನಾವು ಕೂಡ ಇರತಕ್ಕಂಥಾದ್ದರಲ್ಲಿ ೪ಕ್ಕೆ ಪರ್‌ಸೆಂಟ್ ಮೊಟ್ಟೆಯನ್ನು ಮಾಡತಕ್ಕಂಥ ಹೊಣೆ ಇರುವ ಹಾಗೆ ಈ ಮೊಟ್ಟೆ ಉತ್ಪಾದನೆ ಅಥವಾ ಬೆಲೆ, ಮೈಸೂರು ವಲಯದ ಒಂದು ತಳಿಯ ಬೆಲೆ ಮೇಲೆ ಹಾಗೂ ಬೈ ವೋಲ್ಟೇನ್ ತಳಿಯ ಬೆಲೆ ಮೇಲೆ ಇರುತ್ತದೆ. ಈ ಮೊಟ್ಟೆ ಬೆಲೆ ನಿಗದಿ ಮಾಡತಕ್ಕಂಥಾದ್ದು ಈ ಎರಡುಗೂಡಿಗಳ ಬೆಲೆಗಳ ಮೇಲೆ ನಾವು ನಿಗದಿ ಮಾಡುತ್ತೇವೆ. ಮೈಸೂರು ತಳಿ ಆಗಾಗ್ಗೆ ಆದರ ಬೇಡಿಕೆ ಮತ್ತು ಉತ್ಪಾದನೆ ಮೇಲೆ ಅಲ್ಲಿರತಕ್ಕಂಥ ಮಾರುಕಟ್ಟೆ ಸಂಸ್ಥೆಯವರು ಮೈಸೂರು ತಳಿಯ ಗೂಡಿನ ಬೆಲೆಯನ್ನು ನಿಗದಿ ಮಾಡುತ್ತಾರೆ. ಆ ನಿಗದಿ ಮಾಡತಕ್ಕಂಥ ಬೆಲೆಯನ್ನು ನಾವೂ ಕೂಡ ಅದೇ ರೀತಿಯಲ್ಲಿ ಕೊಂಡುಕೊಂಡು ಹಾಗೂ ಬೈ ವೋಲ್ಟೇನ್ ತಳಿಯನ್ನು ಕೂಡ ಇಲಾಖೆಯವರು ನಿಗದಿ ಮಾಡಿಸಿರತಕ್ಕಂಥಾದ್ದನ್ನು ಕೊಂಡುಕೊಂಡು ಇವೆರಡನ್ನೂ ಸೇರಿ ಈ ಮೊಟ್ಟೆ